ಎಂದರೆ ತನ್ನ ರಕ್ತ ಸಂಬಂಧಿಗಳಿಗೆ ಮಾತ್ರ ಸೀಮಿತವಾದ ಪ್ರೀತಿ: ಇನ್ನೂ ಸ್ವಲ್ಪ ಮುಂದುವರಿದರೆ ತನ್ನ ಧರ್ಮಾವಲಂಬಿಗಳಿಗೆ ಮಾತ್ರ ಸೀಮಿತವಾದ ಪ್ರೀತಿ. ಇವರು ಅನ್ಯಧರ್ಮಾವಲಂಬಿಗಳ ವಿಷಯದಲ್ಲಿ ಊಹಿಸಲಾರದಷ್ಟು ನಿರ್ದಯಿಗಳಾಗಿರುತ್ತಾರೆ. ಇದನ್ನು ಧರ್ಮವೆಂದು ಕರೆಯಲಾಗುವುದಿಲ್ಲ. ಏಕೆಂದರೆ, ಬಸವಣ್ಣನವರು ಹೇಳುವಂತೆ, 'ದಯೆಯೇ ಧರ್ಮದ ಮೂಲವಯ್ಯಾ, ದಯೆಯಿಲ್ಲದ ಧರ್ಮಯೇವುದಯ್ಯಾ!' (ಎಂದರೆ ದಯೆಯಿಲ್ಲದ ಧರ್ಮ ಧರ್ಮವೇ ಅಲ್ಲ).

ಇಲ್ಲಿ ಒಂದು ಪ್ರಸಿದ್ಧ ಶ್ಲೋಕ ಮನಸ್ಸಿಗೆ ಬರುತ್ತದೆ:

**ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।**
**ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥**

''ಅಲ್ಪಬುದ್ಧಿಯುಳ್ಳವರು 'ಇವನು ನನ್ನವನು, ಅವನು ಬೇರೆಯವನು' ಎಂದು ಪರಿಗಣಿಸುತ್ತಾರೆ. ಆದರೆ ಉದಾರ ಬುದ್ಧಿಯುಳ್ಳವರಿಗೆ ಇಡೀ ಜಗತ್ತೇ ಒಂದು ಕುಟುಂಬ.'' ಒಂದು ಸ್ವಾರಸ್ಯಕರವಾದ ಕಥೆ ಇದೆ:

ಗುರುವೊಬ್ಬರು ತಮ್ಮ ಶಿಷ್ಯರನ್ನು ಉದ್ದೇಶಿಸಿ, ''ಕತ್ತಲೆಯು ಕಳೆದು ಬೆಳಕು ಹರಿಯಿತು ಎಂದು ಹೇಗೆ ನಿರ್ಧರಿಸುವುದು?'' ಎಂದು ಮಾರ್ಮಿಕ ಪ್ರಶ್ನೆಯನ್ನು ಕೇಳಿದರು. ಒಬ್ಬ ಶಿಷ್ಯನು ಹೇಳಿದನು: ''ದೂರದಲ್ಲಿರುವ ಪ್ರಾಣಿಯನ್ನು ನೋಡಿ ಅದು ಹಸುವೋ ಕುದುರೆಯೋ ಎಂದು ನಿರ್ಧರಿಸಲು ಸಾಧ್ಯವಾದರೆ, ಕತ್ತಲೆಯು ಕಳೆಯಿತೆಂದರ್ಥ.'' ಇನ್ನೊಬ್ಬನ ಉತ್ತರ: ''ದೂರದಲ್ಲಿರುವ ಮರವನ್ನು ನೋಡಿ ಅದು ಯಾವ ಮರ ಎಂದು ಹೇಳಲು ಸಾಧ್ಯವಾದರೆ, ಆಗ ಬೆಳಕು ಹರಿಯಿತು ಎಂದರ್ಥ.'' ಗುರುವಿಗೆ ತೃಪ್ತಿಯಾಗಲಿಲ್ಲ. ಅವರೆಂದರು: ''ಎದುರಿಗಿರುವ ವ್ಯಕ್ತಿಯನ್ನು ನೋಡಿ ಸಹೋದರ ಅಥವಾ ಸಹೋದರಿ ಎಂದು ಗುರುತಿಸಲು ಸಾಧ್ಯವಾದರೆ ಕತ್ತಲೆ ಕಳೆದು ಬೆಳಕು ಹರಿಯಿತು ಎಂದು ಅರ್ಥ.''

## ಕಾಮ-ಕ್ರೋಧ-ಲೋಭ

**ಶ್ರೀರಾಮಕೃಷ್ಣರು :** ''ಚಿತ್ತಶುದ್ಧಿ ಆಗುವವರೆಗೂ ಭಗವಂತನ ದರ್ಶನ ದೊರೆಯುವ ಹಾಗಿಲ್ಲ. ಕಾಮ, ಕ್ರೋಧ, ಲೋಭ ಇವನ್ನೆಲ್ಲ ಜಯಿಸಿದರೆ ಮಾತ್ರ ಆತನ ಕೃಪೆ ಒದಗುತ್ತದೆ; ಆತನ ದರ್ಶನ ದೊರೆಯುತ್ತದೆ. ಕಾಮವನ್ನು ಜಯಿಸಲು ನಾನು ಏನೇನೋ ಸಾಧನೆಯನ್ನು ಮಾಡಬೇಕಾಯಿತು.'' *(ಅಲ್ಲೇ, ಪು. ೧೧೭)*

ಮಲಿನ ಹೃದಯದಲ್ಲಿ ಭಗವಂತನು ನೆಲೆಸಲಾರನು. ಶ್ರೀ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಈ ವಿಷಯವನ್ನು ತುಂಬ ಸ್ವಾರಸ್ಯಕರವಾಗಿ ವರ್ಣಿಸಿರುವರು:

**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ**
**ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜತುಂಬಿ**
**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ**
**ತನುವಿನಲಿ ಹುಸಿತುಂಬಿ ಮನದೊಳಗೆ ವಿಷಯ ತುಂಬಿ**
**ಮನೆಯೊಳಗೆ ಮನೆಯೊಡೆಯನಿಲ್ಲಾ**
**ಕೂಡಲಸಂಗಮದೇವ ।**

ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ:

**ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।**
**ಕಾಮಃಕ್ರೋಧಸ್ತಥಾ ಲೋಭಃ ತಸ್ಮಾದೇತತ್ತ್ರಯಂ ತ್ಯಜೇತ್ ॥**

''ನರಕಕ್ಕೆ ಮೂರು ಬಾಗಿಲುಗಳು: ಕಾಮ, ಕ್ರೋಧ ಮತ್ತು ಲೋಭ. ಇವು ವ್ಯಕ್ತಿಯನ್ನು ನಾಶಮಾಡುತ್ತವೆ. ಆದ್ದರಿಂದ ಈ ಮೂರನ್ನೂ ತ್ಯಜಿಸಿ.'' *(ಗೀತೆ, ೧೬.೨೧)*

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಒಂದು ಕಥೆಯನ್ನು ಇಲ್ಲಿ ಪ್ರಸ್ತಾಪಿಸಬಹುದು. ಮಾನವರು, ದಾನವರು ಮತ್ತು ದೇವತೆಗಳು ಈ ಮೂವರು ಉಪದೇಶಕ್ಕಾಗಿ ಪ್ರಜಾಪತಿಯ ಹತ್ತಿರ ಹೋದರು. ಪ್ರಜಾಪತಿಯು 'ದ' ಎಂದು ಒಂದೇ ಅಕ್ಷರದ ಉಪದೇಶ ಮಾಡಿದನು. 'ದ' ಎಂಬ ಅಕ್ಷರಕ್ಕೆ ಮೂವರೂ ಮೂರು ರೀತಿಯಲ್ಲಿ ಅರ್ಥೈಸಿಕೊಂಡರು. ದೇವತೆಗಳು ಇಂದ್ರಿಯ ಸುಖದಲ್ಲಿ (ಕಾಮ) ಮತ್ತರಾಗಿರುವರು. ಅವರು 'ದ' ಎಂದರೆ 'ದಾಮ್ಯತಾಂ' (ಇಂದ್ರಿಯನಿಗ್ರಹಿಸಿ) ಎಂದು ಅರ್ಥಮಾಡಿಕೊಂಡರು. ದಾನವರು ಕ್ರೂರಿಗಳಾದುದರಿಂದ (ಕ್ರೋಧ) 'ದಯಧ್ವಂ'(ದಯೆ ತೋರಿ) ಎಂದು ಅರ್ಥ ಮಾಡಿಕೊಂಡರು. ಮಾನವರು ಲೋಭಿಗಳಾದುದರಿಂದ 'ದತ್ತ' (ದಾನಮಾಡು) ಎಂದು ಅರ್ಥಮಾಡಿಕೊಂಡರು. ಮನುಷ್ಯರಲ್ಲಿಯೇ ಈ ಮೂವರೂ ಇರುವುದರಿಂದ ನಮಗೆಲ್ಲರಿಗೂ ಈ ಉಪದೇಶ ಅನ್ವಯವಾಗುತ್ತದೆ.

ಎಲ್ಲರಲ್ಲಿಯೂ ಇತರರೊಡನೆ ಬೆರೆಯುವ, ಒಂದಾಗುವ ತವಕವಿರುತ್ತದೆ. ಇದೇ ಪ್ರೀತಿಯ ರೂಪದಲ್ಲಿ ವ್ಯಕ್ತವಾಗುತ್ತದೆ. ವೈಯಕ್ತಿಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಇದಕ್ಕೆ ತಡೆಯುಂಟಾದಾಗ ಅದು ಹಿಂಸಾತ್ಮಕ ರೂಪದಲ್ಲಿ ವ್ಯಕ್ತವಾಗುತ್ತದೆ (ಕ್ರೋಧ.) ಲೋಭಿಗಳ ಸಂಬಂಧವಾದ ಸ್ವಾರಸ್ಯಕರವಾದ, ಹಾಸ್ಯಭರಿತವಾದ ಒಂದು ಶ್ಲೋಕವಿದೆ:

**ಉಭಯೋರ್ನಾಸ್ತಿ ಭೋಗೇಚ್ಛಾ ಪರಾರ್ಥಂ ಧನಸಂಚಯಃ ।**
**ಕೃಪಣೋದಾರಯೋಃ ಪಶ್ಯ ತಥಾಪಿ ಮಹದಂತರಮ್ ॥**

''ಇಬ್ಬರಿಗೂ ಭೋಗೇಚ್ಛೆ ಇಲ್ಲ, ಮತ್ತು ಇತರರಿಗಾಗಿಯೇ ಅವರು ಧನಸಂಚಯ ಮಾಡುತ್ತಾರೆ. ಆದರೂ ಅವರಿಬ್ಬರಲ್ಲೂ ಅದೆಷ್ಟು ಅಂತರ, ನೋಡು! ಅವರು ಯಾರೆಂದರೆ ಜಿಪುಣ ಮತ್ತು ಉದಾರಿ.''

*(ಮುಂದುವರಿಯುವುದು)*

# ಭಾವರಾಜ್ಯದ ಚಕ್ರವರ್ತಿ


ಮಾತಾ ತ್ಯಾಗಮಯೀ

ಆಧ್ಯಾತ್ಮಿಕ ಜಗತ್ತಿನಲ್ಲಿ ಭಾವವ್ಯಾಪಾರದ ಮಹತ್ತ್ವ ವಿಶೇಷವಾದುದು. ಅಗೋಚರ ಜಗತ್ತಿನ ವಿಷಯವಾಗಿ ಮನಸ್ಸು, ಬುದ್ಧಿಗಳು ಸೋತಾದ ಭಾವವೊಂದೇ ಕೈಹಿಡಿದೆತ್ತಬಲ್ಲುದು. ಈ ಸತ್ಯವನ್ನು ಶ್ರೀರಾಮಕೃಷ್ಣರ ಮಾನಸಪುತ್ರರೆಂದೇ ಖ್ಯಾತರಾದ ಸ್ವಾಮಿ ಬ್ರಹ್ಮಾನಂದರ ಜೀವನದಲ್ಲಿ ಕಾಣಬಹುದು. ಈ ಕುರಿತು ವಿವೇಚಿಸಿರುವ ಲೇಖಕಿ ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಶ್ರೀರಾಮಕೃಷ್ಣರನ್ನು 'ಭಾವರಾಜ್ಯದ ಚಕ್ರವರ್ತಿ' ಎಂದು ಕರೆಯಲಾಗಿದೆ. ಈ ಲೇಖನದಲ್ಲಿ ಶ್ರೀರಾಮಕೃಷ್ಣರ ಮಾನಸ ಪುತ್ರರಾದ ಸ್ವಾಮಿ ಬ್ರಹ್ಮಾನಂದರ ಜೀವನದಲ್ಲಿ 'ಭಾವರಾಜ್ಯದ ಚಕ್ರವರ್ತಿ'ತ್ವ ಹೇಗೆ ವಿಜೃಂಭಿಸುತ್ತಿತ್ತು ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಈ ಭಾವರಾಜ್ಯದ ದೃಶ್ಯಗಳ ಚಿಂತನೆ, ಮನನ ಧ್ಯಾನದಿಂದ ನಮ್ಮ ಮನಸ್ಸುಗಳನ್ನು ಮೇಲೆತ್ತಿಕೊಳ್ಳಲು ಸಾಧ್ಯವಾಗುತ್ತದೆ. ಪತಂಜಲಿಯ ಯೋಗಸೂತ್ರದಲ್ಲಿ 'ವಿಶೋಕಾ ವಾ ಜ್ಯೋತಿಷ್ಮತೀ' ಎಂದರೆ 'ಸಂತನೊಬ್ಬನ ರಾಗದ್ವೇಷರಹಿತ ಶುದ್ಧ ಹೃದಯದ ಧ್ಯಾನದಿಂದ ನಮ್ಮ ಉದ್ದೇಶವನ್ನು ಸಿದ್ಧಿಸಿಕೊಳ್ಳಬಹುದು' ಎಂದು ಹೇಳಲಾಗಿದೆ. ಇಲ್ಲಿ ಸ್ವಾಮಿ ಬ್ರಹ್ಮಾನಂದರ ಭಾವಗಳ ಧ್ಯಾನ ಎಂದರೆ ಅವರ ಹೃದಯದ ಧ್ಯಾನ. ನಮ್ಮ ಉದ್ದೇಶ ಪವಿತ್ರರಾಗುವುದು, ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವುದು.

ಭಾವ ಎಂದರೆ ದೀರ್ಘಕಾಲ ಒಂದೇ ಭಗವತ್ ಚಿಂತನೆಯಲ್ಲಿ ತನ್ಮಯನಾಗಿರುವ ಸಾಮರ್ಥ್ಯ. ಸಾಧಕ ನಿರಂತರ ಸಾಧನೆ, ಮನಶ್ಶುದ್ಧಿ, ಧ್ಯಾನದ ಫಲವಾಗಿ ಒಂದೇ ಭಾವದಲ್ಲಿ ಎಷ್ಟರಮಟ್ಟಿಗೆ ತಲ್ಲೀನನಾಗುತ್ತಾನೆಂದರೆ ಅವನಿಗೆ ತನಗೆ ಅತಿ ಪ್ರಿಯವಾದ ದೇಹವೂ ಮರೆತು ಹೋಗುತ್ತದೆ, ಸುತ್ತಲ ಜಗತ್ತೂ ಮರೆತುಹೋಗುತ್ತದೆ. ಆ ಸಂದರ್ಭದಲ್ಲಿ ತನ್ನ ಪ್ರತ್ಯೇಕ ಅಸ್ತಿತ್ವದ ಅರಿವು ಇರುವುದೇ ಇಲ್ಲ. ಕೇವಲ ಒಂದೇ ಭಾವದ ಅವಿಚ್ಛಿನ್ನ ಪ್ರವಾಹ. ಅದರ ಆವೇಗಕ್ಕೆ ಅವನಿಗೆ ಅಶ್ರು, ಪುಳಕ, ರೋಮಾಂಚನ ಇತ್ಯಾದಿ ಆಗಬಹುದು ಅಥವಾ ಬಾಹ್ಯಜ್ಞಾನಶೂನ್ಯನೂ ಆಗಬಹುದು. ನಮಗೆ ಇಂದ್ರಿಯರಾಜ್ಯ ಎಷ್ಟು ಸತ್ಯವಾದುದೋ ಸಂತನಿಗೆ ಅಥವಾ ಭಕ್ತನಿಗೆ ಭಾವಗಳ ರಾಜ್ಯ ಅದಕ್ಕಿಂತ ಅಧಿಕ ಸತ್ಯವಾದುದು.

ಶ್ರೀರಾಮಕೃಷ್ಣರು ''ನರೇಂದ್ರ ನಿರಾಕಾರ ವಲಯಕ್ಕೆ ಸೇರಿದವನು. ರಾಖಾಲ (ಸ್ವಾಮಿ ಬ್ರಹ್ಮಾನಂದರು) ಸಾಕಾರ ವಲಯಕ್ಕೆ ಸೇರಿದವನು'' ಎಂದು ಹೇಳಿದ್ದಾರೆ. ಸ್ವಾಮಿ ಬ್ರಹ್ಮಾನಂದರು ನಿತ್ಯ ನಿರಂತರ ಆನಂದ ಸಮಾಧಿಯಲ್ಲಿರುತ್ತಿದ್ದರು. ಅವರ ಪ್ರಭಾವಲಯದೊಳಗೆ ಪ್ರವೇಶಿಸಿದವರೆಲ್ಲರಿಗೂ ಅವರು ಮೌನವಾಗಿಯೇ ದೃಷ್ಟಿಮಾತ್ರದಿಂದ, ಇಚ್ಛಾಮಾತ್ರದಿಂದ, ಸಂಕಲ್ಪಮಾತ್ರದಿಂದ ಆಧ್ಯಾತ್ಮಿಕ ಸತ್ತ್ವವನ್ನು ಜಾಗೃತಗೊಳಿಸಬಲ್ಲವರಾಗಿದ್ದರು.



ಸ್ವಾಮಿ ಬ್ರಹ್ಮಾನಂದರು ಮದುರೈಗೆ ಹೋಗಿದ್ದಾಗ ಅವರಿನ್ನೂ ದೇವಸ್ಥಾನಕ್ಕೆ ಹೋಗಿಲ್ಲ, ರೈಲು ನಿಲ್ದಾಣದಲ್ಲಿರುವಾಗಲೇ ಅವರಿಗೆ ತಾಯಿಯ ಸಾನ್ನಿಧ್ಯದ ಅನುಭವವಾಗಿ ಭಾವ ಆವರಿಸಿಕೊಂಡಿತು. ಅನಂತರ ಅವರು ಗರ್ಭಗೃಹಕ್ಕೆ ಹೋದಾಗ ತಾಯಿಯ ಶ್ರೀವಿಗ್ರಹದಿಂದ ಕೆಲವು ಅಡಿ ದೂರದಲ್ಲಿ ತಾಯಿಯನ್ನೇ ದರ್ಶಿಸುತ್ತ ಪ್ರತಿಮೆಯಂತೆ ನಿಂತುಬಿಟ್ಟರು. ಅವರು ತಾಯಿಯನ್ನು ನೋಡುತ್ತಾ ಹೃದಯತುಂಬಿ ಕಣ್ಣುಮುಚ್ಚಿ

ದರು. ಅವರ ಇಡೀ ಶರೀರ ಕಂಪಿಸತೊಡಗಿತು. ಅವರು ಕ್ರಮೇಣ ಬಾಹ್ಯಜ್ಞಾನ ಶೂನ್ಯರಾದರು. ಯಾವುದೇ ಚಲನೆಯಿಲ್ಲ, ಉಸಿರಾಟವಿಲ್ಲ. ಸುಮಾರು ಅರ್ಧಗಂಟೆ ಅವರು ಅದೇ ಸ್ಥಿತಿಯಲ್ಲಿದ್ದರು. ಶಿಷ್ಯರು ಅವರನ್ನು ನಿಧಾನವಾಗಿ ಕೋಣೆಗೆ ಕರೆದುಕೊಂಡು ಹೋದರು. ಅಂದು ರಾತ್ರಿ ಅವರು ಆಹಾರ ಸ್ವೀಕರಿಸಲಿಲ್ಲ, ಮಾತನಾಡಲಿಲ್ಲ. ಮದುರೈಯಲ್ಲಿ ಅವರು ಮೂರು ದಿನಗಳಿದ್ದರು. ಮೂರು ದಿನಗಳೂ ಅವರು ತಾಯಿಯ ಭಾವದಲ್ಲಿ ಮತ್ತರಾಗಿದ್ದರು. ಪ್ರಯಾಗರಾಜ್ ಬಳಿಯಿರುವ ವಿಂಧ್ಯಾಚಲ ದೇವೀ ದೇವಸ್ಥಾನಕ್ಕೆ ಹೋದಾಗಲೂ ಅವರಲ್ಲಿ ಇದೇ ಬಗೆಯ ಉತ್ಕಟ ಭಾವ ವ್ಯಕ್ತವಾಗಿತ್ತು.

ಕಾಶಿಯಲ್ಲಿ ಶ್ರೀರಾಮಕೃಷ್ಣರ ಜನ್ಮದಿನೋತ್ಸವದಂದು ಶ್ರೀರಾಮಕೃಷ್ಣರ ನೂತನ ಭಾವಚಿತ್ರದ ಪ್ರತಿಷ್ಠಾಪನೆಯ ಕಾರ್ಯಕ್ರಮವಿದ್ದಿತು. ಅಂದು ವಿಶೇಷ ಪೂಜೆ ಹಾಗೂ ಭಜನೆ ನಡೆಯಲಿತ್ತು. ಮಹಾರಾಜ್ ಗಾಯಕರಿಗೆ, 'ಏಶೇಛೇ ನೂತನ್ ಮಾನುಷ್ ದೇಖ್ಬೆ ಜದಿ ಆಯ್ ಚಲೇ' (ಕನ್ನಡದಲ್ಲಿ, 'ನೋಡಿರಣ್ಣ ನೀವೆಲ್ಲ ಬಂದು ಈ ನೂತನ ಮಾನವನ') ಎಂಬ ಭಜನೆಯನ್ನು ಹಾಡಲು ಸೂಚಿಸಿದರು. ಗಾಯಕ ಭಜನೆಯನ್ನು ಹಾಡುತ್ತಿದ್ದಂತೆ ಮಹಾರಾಜ್ ಎದ್ದು ನಿಂತು ನರ್ತಿಸತೊಡಗಿದರು. ಸ್ವಾಮಿ ತುರೀಯಾನಂದರು ಹಾಗೂ ಸ್ವಾಮಿ ಶಾರದಾನಂದರು ಅವರ ಜೊತೆಗೂಡಿದರು. ಬಳಿಕ ಎಲ್ಲ ಸಂನ್ಯಾಸಿಗಳೂ, ಭಕ್ತರು ಹಾಗೂ ಮಕ್ಕಳೂ ನರ್ತನದಲ್ಲಿ ಸೇರಿಕೊಂಡರು. ಒಂದು ದಟ್ಟವಾದ ಆಧ್ಯಾತ್ಮಿಕ ಭಾವ ಅಲ್ಲಿ ಘನೀಭೂತವಾಯಿತು. ಮಹಾರಾಜರ ಸಂಗಪ್ರಭಾವದಿಂದ ಅಲ್ಲಿ ಸೇರಿದ ಪ್ರತಿಯೊಬ್ಬರಿಗೂ ದೇಶಕಾಲಗಳ ಪರಿವೆ ಕಳಚಿಹೋಯಿತು.

ಮಹಾರಾಜರಿಗೆ ಭಜನೆ ಪ್ರಿಯವಾಗಿತ್ತು. ಒಂದು ಬಾರಿ ಬಲರಾಮ ಬೋಸನ ಮನೆಯಲ್ಲಿ ರಾಮನಾಮ ಸಂಕೀರ್ತನೆ ನಡೆಯುತ್ತಿತ್ತು. ಸುಮಾರು ೮೦-೯೦ ಸಂನ್ಯಾಸಿಗಳು ಹಾಗೂ ಅನೇಕ ಭಕ್ತರು ಅಲ್ಲಿ ಸೇರಿದ್ದರು. ಮಹಾರಾಜ್ ಕಣ್ಣುಮುಚ್ಚಿ ಕುಳಿತಿದ್ದರು. ಅವರ ಇಡೀ ಶರೀರ ಕಂಪಿಸುತ್ತಿತ್ತು. ಅಲ್ಲೊಂದು ಉತ್ಕಟ ಭಾವ ನಿರ್ಮಾಣಗೊಂಡಿತ್ತು. ಸ್ವಲ್ಪ ಹೊತ್ತಿನ ಬಳಿಕ ಮಹಾರಾಜ್ ಅಲ್ಲಿಂದ ಎದ್ದು ಹೋದರು. ತದನಂತರ ಅವರು, ''ಇಂದು ನಮಗೆ ನೂರು ಸಲ ಧ್ಯಾನಿಸಿದುದಕ್ಕಿಂತ ಅಧಿಕ ಫಲ ಲಭಿಸಿದೆ'' ಎಂದರು.

ಒಂದು ಮಧ್ಯಾಹ್ನ ಮೂರು ಘಂಟೆಯ ಸಮಯ. ಸ್ವಾಮಿ ಬ್ರಹ್ಮಾನಂದರು ವಿಶ್ರಾಂತಿ ಮುಗಿಸಿ ಮುಖ ತೊಳೆಯಲು ತಾರಸಿಗೆ ಬಂದಿದ್ದಾರೆ. ಶಿಷ್ಯ ಅವರ ಅಂಜಲಿಗೆ ನೀರು ಹಾಕುತ್ತಿದ್ದಾನೆ. ಒಡನೆಯೆ ಅವರ ದೃಷ್ಟಿ ಗಂಗೆಯ ಆಚೆಯ ದಡದಲ್ಲಿರುವ ದಕ್ಷಿಣೇಶ್ವರದ ಕಡೆಗೆ ಹೋಯಿತು. ಅವರ ಮನಸ್ಸು ಸ್ಥಿರವಾಯಿತು. ಅಂಜಲಿಯಲ್ಲಿನ ನೀರು ಕೆಳಕ್ಕೆ ಉರುಳಿತು. ಸೂರ್ಯ ನೆತ್ತಿಯ ಮೇಲಿದ್ದ. ತಾರಸಿಯ ನೆಲ ಒಂದೇ ಸಮನೆ ಸುಡುತ್ತಿತ್ತು. ಅವರು ಅದಾವುದರ ಪರಿವೆಯೇ ಇಲ್ಲದೆ ಸ್ಥಿರವಾಗಿ ನಿಂತಿದ್ದರು. ಬಹಳ ಹೊತ್ತು ಅದೇ ಸ್ಥಿತಿಯಲ್ಲಿದ್ದರು. ಕ್ರಮೇಣ ಬಾಹ್ಯ ಪ್ರಜ್ಞೆಗೆ ಮರಳಿ ಮುಖ ತೊಳೆದುಕೊಂಡರು.

ಒಮ್ಮೆ ರಾಜಾ ಮಹಾರಾಜರು (ಸ್ವಾಮಿ ಬ್ರಹ್ಮಾನಂದರು) ಪುರಿಯಲ್ಲಿದ್ದರು. ಅವರ ಮನಸ್ಸು ನಿರಂತರ ಉನ್ನತ ಭೂಮಿಕೆಯಲ್ಲಿರುತ್ತಿತು. ಒಂದು ಹುಣ್ಣಿಮೆಯ ರಾತ್ರಿ ಇಡೀ ವಾತಾವರಣ ಹಾಲು ಬೆಳದಿಂಗಳಿನಿಂದ ತುಂಬಿತ್ತು. ಒಂದು ಪವಿತ್ರ ಗಂಭೀರ ಮೌನ ಎಲ್ಲೆಡೆ ಪಸರಿಸಿತ್ತು. ಅವರು ಅಂಗಳದಲ್ಲಿ ಮಂಚದ ಮೇಲೆ ಒರಗಿಕೊಡು ಮಾತನಾಡುತ್ತಿದ್ದರು. ಮಾತು ಬಹು ಹೊತ್ತು ಮುಂದುವರಿಯಿತು. ಶಿಷ್ಯರೆಲ್ಲ ಮೈಯೆಲ್ಲ ಕಿವಿಯಾಗಿ ಆ ಅಮೃತವಾಣಿಗಳನ್ನು ಆಲಿಸುತ್ತಿದ್ದರು. ಇದ್ದಕ್ಕಿದ್ದಂತೆ ಅವರ ಮನಸ್ಸಿನಲ್ಲಿ ಚೈತನ್ಯ ಮಹಾಪ್ರಭುವಿನ ಭಾವ ಜಾಗೃತವಾಯಿತು. ಅವರು ಅತೀವ ಮಧುರ ಧ್ವನಿಯಿಂದ, ''ಚೈತನ್ಯದೇವ ಇಂತಹ ಹುಣ್ಣಿಮೆಯ ರಾತ್ರಿಗಳಲ್ಲಿ ನಿದ್ರಿಸುತ್ತಲೇ ಇರಲಿಲ್ಲ. ಶ್ರೀಕೃಷ್ಣ ವಿರಹದಿಂದ ಅಶಾಂತನಾಗಿ ಇಡೀ ರಾತ್ರಿಯನ್ನು ಕಳೆಯುತ್ತಿದ್ದನು'' ಎಂದರು. ಹೀಗೆ ಹೇಳುತ್ತಿದ್ದಂತೆ ಅವರಲ್ಲೂ ವಿರಹಜ್ವಾಲೆ ಹೊತ್ತಿಕೊಂಡಿತು. ಅವರು, ''ಚೈತನ್ಯದೇವ ಈ ದಿನಗಳಲ್ಲಿ ನಿದ್ರಿಸುತ್ತಿರಲಿಲ್ಲ. ನಾವು ನಿದ್ರೆಯಲ್ಲಿ ರಾತ್ರಿಯನ್ನು ವ್ಯರ್ಥ ಮಾಡೋಣವೆ? ನಮಗೆ ಧಿಕ್ಕಾರ'' ಎನ್ನುತ್ತಿರಲು ಅಪ್ರಯತ್ನವಾಗಿ ಅವರ ಕಪೋಲಗಳ ಮೇಲೆ ವಿರಹಾಶ್ರುಗಳು ಉರುಳಿದವು. ಅವರ ಅದ್ಭುತ ಆಧ್ಯಾತ್ಮಿಕ ಭಾವವನ್ನು ಕಂಡು ಶಿಷ್ಯರ ನಿದ್ರೆಯೂ ಹಾರಿಹೋಯಿತು. ಅವರೆಲ್ಲರೂ ಇಡೀ ರಾತ್ರಿಯನ್ನು ಆಧ್ಯಾತ್ಮಿಕ ಭಾವದಲ್ಲಿ ಕಳೆದರು.

ಮಹಾರಾಜರಿಗೆ ರಾಮಕೃಷ್ಣ ಸಂಘದ ಟ್ರಸ್ಟಿಗಳ ಸಭೆಯಲ್ಲಿ ಭಾಗವಹಿಸಲು ಮನಸ್ಸಿರುತ್ತಿರಲಿಲ್ಲ. ಶಿಷ್ಯರೊಬ್ಬರು ಅವರಿಗೆ, ''ತಾವು ಸಂಘದ ಸಭೆಗಳಲ್ಲಿ ಭಾಗವಹಿಸಲು ಏಕೆ ಇಷ್ಟೊಂದು ಮೀನ ಮೇಷ ಮಾಡುತ್ತೀರಿ?'' ಎಂದು ಪ್ರಶ್ನಿಸಿದಾಗ ಅವರು ಹೇಳಿದರು, ''ಇಡೀ ಜಗತ್ತು ನನಗೆ ನೆರಳಿನಂತೆ ಗೋಚರಿಸುತ್ತದೆ. ಆದ್ದರಿಂದ ವ್ಯವಹಾರದ ಸಣ್ಣ ಪುಟ್ಟ ಅಂಶಗಳ ಕಡೆ ಗಮನ ನೀಡಲು ಮನಸ್ಸಾಗುವುದಿಲ್ಲ.'' ಅವರ ಪ್ರಜ್ಞೆಯು ಸದ್ವಸ್ತುವಿನಲ್ಲಿ ಲಯವಾಗಿರುವಾಗ ಜಡವಾದ ಯಾವುದರಿಂದ ತಾನೆ ಅವರು ಜಗತ್ತನ್ನು ಗ್ರಹಿಸುವುದು? ಆಗ ಜಗತ್ತು ಯತ್ಕಿಂಚಿತ್ತು ಕಾಣಿಸಿದರೂ ಕೂಡ ನೆರಳಿನಂತೆ ಭಾಸವಾಗುತ್ತದೆ. ಇದು ಅವರ ಮನೋಭೂಮಿಕೆ! ಪರಿಣಾಮ ಅವರ ವ್ಯಕ್ತಿತ್ವದಲ್ಲಿ ಅದೇನು ಅನ್ಯಮನಸ್ಕತೆ, ಅದೇನು ಪಾವಿತ್ರ್ಯ, ಅದೇನು ಭಯಶೂನ್ಯತೆ ಮತ್ತು ಪರಮಶಾಂತಿ! ''ಜಗತ್ತಿನಲ್ಲಿ ಅವರನ್ನು ಕಟ್ಟಿಹಾಕುವಂತಹ ವಸ್ತು ಯಾವುದೂ ಇಲ್ಲ! ಏನದ್ಭುತ! ಅಂತಹ ವ್ಯಕ್ತಿಗಳನ್ನು ಕಂಡಲ್ಲದೆ ಅಂಥವರು ಇರಬಹುದು ಎಂದು ಊಹಿಸುವುದೂ ಕಠಿಣ'' ಎಂದು ಸ್ವಾಮಿ ಅಶೋಕಾನಂದರು ಬರೆಯುತ್ತಾರೆ. ಶ್ರೀರಾಮಕೃಷ್ಣರಿಗೆ ಯಾವುದೇ ಸಣ್ಣ ಸಣ್ಣ ಪ್ರಚೋದನೆಯಾಗು